ಒಂದೂ ತಿಳಿಯಲಿಲ್ಲ. 'ನಾನೇನು ಕೇಳಬಾರ್ದು ಕೇಳಿದೆ. ಅವಳು ಎಲ್ಲರನ್ನು ತನ್ನಿಷ್ಟಕ್ಕೆ ರೇಗಿಸ್ತಾಳೆ. ನಾನ್ಯಾಕೆ ರೇಗಿಸ್ಬಾರ್ದು. ರೇಗಿಸುವ ಹಕ್ಕು ಅವಳಿಗೆ ಮಾತ್ರಾನಾ?' ಎನಿಸಿತು. ಅವಳೆಷ್ಟು ಪ್ರಯತ್ನಪಟ್ಟರೂ ಅಳುವನ್ನು ತಡೆದುಕೊಳ್ಳಲು ಸಾಧ್ಯವಾಗಲೇ ಇಲ್ಲ. ಆ ಕಣ್ಣೀರಿಗೆ ನಾನೇ ಕಾರಣ ಎನಿಸಿದ್ದರಿಂದ 'ಸ್ಸಾರಿ' ಎಂದು ಮುಂದಿನ ಮಾತಿಗೆ ಅವಕಾಶ ಕೊಡದೆ ನಾನು ನನ್ನ ಕೆಲಸ ಮುಂದುವರಿಸಿದೆ.

"ನೀವ್ಯಾಕೆ ಸ್ಸಾರಿ ಕೇಳ್ತೀರಾ? ಇದ್ರಲ್ಲಿ ನಿಮ್ಮದೇನು ತಪ್ಪಿಲ್ಲ. ಬೇಸರವಾಗಿದ್ದು ನಂಗೆ. ಯಾಕೆಂದ್ರೆ ನನ್ನ ಜೀವ್ನ ಇರೋದೆ ಹಾಗೆ. ನಾನೇನು ಮಾಡ್ಲಿ? ನಾನು ಸರಿಯಿಲ್ಲ" ಎಂದು ಸಂಜೆ ಮನೆಗೆ ಹೋಗುವ ದಾರಿಯಲ್ಲಿ ಹೇಳಿದವಳತ್ತ ಅಚ್ಚರಿಯಿಂದ ನೋಡಿದೆ. 'ನಾನು ಸರಿಯಿಲ್ಲ' ಎಂದು ತನ್ನ ಬಗ್ಗೆ ಹೇಳಿಕೊಳ್ಳುತ್ತಿರುವ ಹೆಣ್ಣನ್ನು ಎನ್ನುವುದಕ್ಕಿಂತ ಮನುಷ್ಯ ಜೀವಿಯನ್ನು ನೋಡುತ್ತಿರುವುದು ಇದೇ ಮೊದಲು. ಮಾಡಬಾರದ ಪಾಪ ಮಾಡಿ ಸಂಭಾವಿತರಂತೆ ನಡೆದುಕೊಳ್ಳುವ ನಮ್ಮ ಜನ ಒಮ್ಮೆಯೂ ತಮ್ಮ ಕೆಲಸಗಳನ್ನು ವಿಮರ್ಶೆ ಮಾಡಿಕೊಳ್ಳುವುದಿಲ್ಲ. ಅಂತಹದರಲ್ಲಿ ಅವಳು ತಾನು 'ಸರಿಯಿಲ್ಲ' ಎಂದು ರಾಜಾರೋಷವಾಗಿ, ಘಂಟಾಘೋಷವಾಗಿ ನನ್ನ ಬಳಿ ಹೇಳುತ್ತಿದ್ದಾಳೆಂದರೆ ಅವಳು ಸಾಮಾನ್ಯಳಲ್ಲ ಎನಿಸಿತು. ಬೇರೆಯವರನ್ನು ತರಾಟೆಗೆ ತೆಗೆದುಕೊಂಡಂತೆ ತನ್ನ ಬಗ್ಗೆಯೂ ಹೇಳಿಕೊಂಡ ಅವಳು ನನಗೆ ತುಂಬಾ ಇಷ್ಟವಾದಳು ಕೂಡ. ನಾನು ಆ ಸಲಿಗೆಯಲ್ಲಿಯೇ "ಜನ ನಿಮ್ಮ ಬಗ್ಗೆ ತುಂಬಾ ಕೀಳಾಗಿ ಮಾತಾಡ್ತಾರೆ. ಆದ್ರೂ ನೀವು ನಗ್ತಾನೆ ಇರ್ತೀರಾ! ನೀವು ತುಂಬಾ ಗಂಡಸ್ರ ಜೊತೆ ಸಂಬಂಧ ಇಟ್ಕೊಂಡಿದ್ದೀರಿ ಅಂತ ಮಾತಾಡ್ತಾ ಇರ್ತಾರೆ. ಇದೆಲ್ಲ ನಿಜನಾ? ನೀವು

